ದಿನಾಂಕ : 24–01–2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

4. ಈ ದಿನ 1 ರಿಂದ 4 ನೇ ಆರೋಪಿತರು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು ಆರೋಪಿತ ಪರ ವಕೀಲರು ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ವಿನಾಯತಿ ಅರ್ಜಿ ಸಲ್ಲಿಸಿದ್ದು, ಅದನ್ನು ನ್ಯಾಯಾಲಯ ಪುರಸ್ಕರಿಸಲಾಗಿರುತ್ತದೆ. ಆರೋಪಿತರನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲು: ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಈಗ ಎಂಟೂವರೆ ವರ್ಷಗಳ ಹಿಂದೆ ನನ್ನ ಜಮೀನ ಹತ್ತಿರ 5 ಜನ ತೆಲುಗು ಭಾಷೆ ಮಾತನಾಡುವವರು ಬಂದಿದ್ದರು ಎಂದರೆ ಸರಿ. ಸದರಿ 4 ಜನ ಈ ಪ್ರಕರಣದ 1 ರಿಂದ 4 ನೇ ಆರೋಪಿತರು ಎನ್ನುವ ಸರ್ಕಾರಿ ವಕೀಲರ ಪ್ರಶ್ನೇಗೆ ಸಾಕ್ಷಿ ಸದರಿಯವರು ಹೆಸರು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ರಸ್ತೆ ನಿರ್ಮಾಣದ ಸಲುವಾಗಿ ಕಾರ್ಮಿಕರನ್ನು ಕರೆದುಕೊಂಡು ಬರುತ್ತಿದ್ದು ಸದರು ವಾಸಿಸುವ ಸಲುವಾಗಿ ನಿಮ್ಮ ಜಮೀನಿನಲ್ಲಿ ಶೆಡ್ಡು ನಿರ್ಮಿಸಬೇಕಾಗುತ್ತದೆ ಅದಕ್ಕೆ ತಿಂಗಳಿಗೆ ರೂ.3,000/– ಬಾಡಿಗೆ ಕೊಡುತ್ತೇವೆ ಎಂದು ಹೇಳಿದ್ದರು ಎಂದರೆ ಸರಿ. ಅದೇ ರೀತಿ ಕಾರ್ಮಿಕರಿಗೆ ವಾಸಿಸಲು ಒಟ್ಟು 18 ತಾತ್ಕಾಲಿಕ ಶೆಡ್ಡುಗಳನ್ನು ನಮ್ಮ ಜಮೀನಿನಲ್ಲಿ ನಿರ್ಮಿಸಿದ್ದರು ಎಂದರೆ ಸರಿ. ಶೆಡ್ ನಿರ್ಮಿಸಿದ 3 ತಿಂಗಳ ನಂತರ ಬೆಂಗಳೂರಿನಿಂದ ಅಧಿಕಾರಿಗಳು ಬಂದಿದ್ದು, ಆಗ ಸದರಿಯವರು ಪರಿಶೀಲನೆ ಮಾಡಿದಾಗ ಕೆಲಸ ಮಾಡುತ್ತಿದ್ದ ಕಾರ್ಮಿಕರು ಜೀತ ಕಾರ್ಮಿಕರು ಎಂದು ಸದರಿ ಕಾರ್ಮಿಕರನ್ನು ಕರೆದುಕೊಂಡು ಬಂದು ಇಟ್ಟಿದ್ದಂತಹ ವ್ಯಕ್ತಿಗಳ ಮೇಲೆ ಸದರಿ ಅಧಿಕಾರಿಗಳು ದೂರು ದಾಖಲಿಸಿದ್ದು ನನಗೆ ಗೊತ್ತಾಯಿತು

ಎಂದರೆ ಸರಿ. ದಿಃ28.11.2017 ರಂದು ಚಿಕ್ಕೋಡಿ ಡಿ.ವೈ.ಎಸ್.ಪಿ ರವರು ನಮ್ಮ ಜಮೀನಿನಲ್ಲಿ ತಾತ್ಕಾಲಿಕವಾಗಿ ನಿರ್ಮಿಸಿದ ಶೆಡ್ ಹತ್ತಿರ ಬಂದಿದ್ದು ಆಗ ನಾನು ಮತ್ತು ಪಂಚರಾದ ಚಾಸಾ-4 ಮತ್ತು 5 ರವರು ಹಾಜರಿದ್ದು , ಸದರಿಯವರ ಸಮಕ್ಷಮ ನಾನು ಪೋಲಿಸರಿಗೆ ಸ್ಥಳವನ್ನು ತೋರಿಸಿದಂತೆ ಪೋಲಿಸರು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಆ ಸಂದರ್ಭದಲ್ಲಿ ಪೋಲಿಸರು ಪೋಟೋ ತೆಗೆದಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆ ಮಾಡುವ ಸಂದರ್ಭದಲ್ಲಿ ತನಿಖಾಧಿಕಾರಿಗೆ ಕಾರ್ಮಿಕರನ್ನು ಕರೆದುಕೊಂಡು ಬಂದಂತಹ ವ್ಯಕ್ತಿಗಳ ಹೆಸರು ಮತ್ತು ವಿಳಾಸವನ್ನು ವಿವರದ ಬಗ್ಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈಗ ಈ ಪ್ರಕರಣವಾಗಿ 8 ವರ್ಷಗಳಾದ ಕಾರಣ ಆ ದಿನ ಬಂದಂತಹ 4 ಜನ ವ್ಯಕ್ತಿಗಳನ್ನು ಗುರುತಿಸಲು ಆಗುವುದಿಲ್ಲ.

2. ದಿಃ 28.11.2017 ರಂದು ನೀಡದ ಹೇಳಿಕೆಯಲ್ಲಿ ರಸ್ತೆ ಕಾಮಗಾರಿ ಕೆಲಸಕ್ಕಾಗಿ ತೆಲಂಗಾಣಾ ರಾಜ್ಯ --------------------------------- ರಾಜ್ಯ ಎಂದು ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ವಿಶೇಷ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ನಿಪಿಃ 8 ಎಂದು ಗುರುತಿಸಲಾಯಿತು.

3. ಈ ಪ್ರಕರಣದ 4 ಜನ ಆರೋಪಿತರ ಹೆಸರು ಮತ್ತು ಅವರನ್ನು ನೋಡಿದರೂ ಸಹ ಅವರನ್ನು ಗುರುತಿಸಲು ಆಗುವುದಿಲ್ಲ ಅಂತಾ ಹೇಳಿ ಸದರಿ ಆರೋಪಿತರಿಗೆ ಸಹಾಯ ಮಾಡಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಶ್ರೀ. ಬಿ.ಜೆ.ಜಿ ವಕೀಲರ ಪರವಾಗಿ ಶ್ರೀ.ಎಸ್.ಬಿ.ಪಿ ವಕೀಲರಿಂದ ಆರೋಪಿತರ ಪರವಾಗಿ**

ನನ್ನ ಜಮೀನಿನಲ್ಲಿ ಕಾರ್ಮಿಕರಿಗೆ ತಾತ್ಕಾಲಿಕವಾದ ಶೆಡ್ಡನ್ನು ನಿರ್ಮಿಸಲು ತಿಂಗಳಿಗೆ ರೂ.3,000/- ಬಾಡಿಗೆ ಮಾತುಕತೆ ಬಗ್ಗೆ ಕರಾರು ಪತ್ರವನ್ನು ಮಾಡಿಕೊಂಡಿರುವುದಿಲ್ಲ ಎಂದರೆ

ಸರಿ. ನಮ್ಮ ಜಮೀನಿನಲ್ಲಿ ಯಾವುದೇ ಕಾರ್ಮಿಕರಿಗೆ ತಾತ್ಕಾಲಿಕವಾದ ಶೆಡ್ಡನ್ನು ನಿರ್ಮಿಸಿರಲಿಲ್ಲ ಎಂದರೆ ಸರಿ. ನಿಪಿಃ7 ರಲ್ಲಿ ತಾತ್ಕಾಲಿಕವಾದ ಶೆಡ್ಡನ್ನು ನಿರ್ಮಿಸಿದ ಬಗ್ಗೆ ಕಂಡುಬರುತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.